| | | | |
|---|---|---|---|
| ಕರ್ನಾಟಕ ಸರ್ಕಾರ | | | (ಸಿ.ಆರ್.ಪಿ-67) |
| ಹೇಳಿಕೆ ಹಾಳೆ (ಆರ್.ಸಿ. ಸಂಖ್ಯೆ 57) ನಮೂನೆ ಸಂಖ್ಯೆ 4 | ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಚನ್ನಪಟ್ಟಣ | | |
| | ಸಿ.ಸಿ ನಂ. 4641/2022 | | |
| | | ಸಿ.ಡಬ್ಲೂ | 5 |
| | | ಪಿ.ಡಬ್ಲೂ | 7 |
| ಸಾಕ್ಷಿದಾರರ ಹೆಸರು | ರಘು ಆರ್ ಬಿನ್ ರಮೇಶ | | |
| ವಯಸ್ಸು | 32 ವರ್ಷ | | |
| ಉದ್ಯೋಗ | ಖಾಸಗಿ ಕೆಲಸ | | |
| ವಾಸಸ್ಥಳ | ತಗಚಗೆರೆ, ಚನ್ನಪಟ್ಟಣ | | |

**ದಿನಾಂಕಃ- 18.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

**1)** ಚಾಸಾ-1 ರಿಂದ 3 ರವರು ನನ್ನ ಸ್ನೇಹಿತರು. ಆರೋಪಿತನ ಪರಿಚಯ ಇಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಸಾಕ್ಷಿಯು ನಿಪಿ.3 ಅಮಾನತ್ತು ಪಂಚನಾಮೆ ಮತ್ತು ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ಈಗಾಗೇ ನಿಪಿ 3(ಬಿ) ಎಂದು ಗುರುತಿಸಲಾಗಿದೆ. ನಿಪಿ.3 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ.3 ಕ್ಕೆ ಪೋಲಿಸರ ಕೋರಿಕೆಯ ಮೇರೆಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ.

**ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೋರಿದ್ದು, ಕೋರಿಕೆಯ ಮೇರೆಗೆ ಅನುಮತಿ ನೀಡಲಾಗಿದೆ.**

**ಪಾಟೀ ಸವಾಲುಃ- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

1) ದಿಃ07.08.2022 ರಂದು ಚನ್ನಪಟ್ಟಣ ಸಂಚಾರಿ ಪೊಲೀಸ್ ಠಾಣೆಯ ಮುಂಭಾಗಕ್ಕೆ ನನ್ನನ್ನು ಕರೆಸಿ ಸ್ಥಳದಲ್ಲಿ ಕೆಎ55ಇಸಿ0983 ಮತ್ತು ಕೆಎ50ಇ8746 ನೇದ್ದರ ಎರಡು ದ್ವಿಚಕ್ರ ವಾಹನಗಳನ್ನು ನನ್ನ ಹಾಗೂ ಚಾಸಾ-1 ಮತ್ತು 2 ರವರ ಸಮಕ್ಷಮ ಜಪ್ತುಪಡಿಸಿ ನಿಪಿ.3 ರಂತೆ ಪಂಚನಾಮೆ ಮಾಡಿ ಅಲ್ಲೇ ನನ್ನ ಸಹಿ ಪಡೆದರು ಎಂದರೆ ಸರಿಯಲ್ಲ. ಆರೋಪಿತ ಪರಿಚಯ ಇರುವ ಕಾರಣ ಆತನ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ.

**ಪಾಟೀ ಸವಾಲುಃ**ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು)

ಓ.ಹೆ.ಕೆ.ಸರಿ ಇದೆ.

ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳು

ಚನ್ನಪಟ್ಟಣ.